ಕರ್ನಾಟಕ ಸರ್ಕಾರ

(4)

ಸಂಖ್ಯೆ:ನಅಇ 73 ಎಸ್ಎಫ್ಸಿ 2016.

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ
ಬೆಂಗಳೂರು, ದಿನಾಂಕ:26-02-2016.

ಇವರಿಂದ:
ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

AEE-1) AEE 2
pl. put up note for

ಇವರಿಗೆ:
ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರಪಾಲಿಕೆ,
ಬೆಂಗಳೂರು.

ಮಾನ್ಯರೆ,

ವಿಷಯ:-2015-16ನೇ ಸಾಲಿನ ಬಜೆಟ್ ಘೋಷಣೆಯನ್ವಯ ಬಿಬಿಎಂಪಿ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡಿರುವ ಟಿಎಂಸಿ ಮತ್ತು ಸಿಎಂಸಿಗಳಿಗೆ ಒದಗಿಸಿರುವ ರೂ.250.00ಕೋಟಿ ವೆಚ್ಚದ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:-1) ಸರ್ಕಾರದ ಆದೇಶ ಸಂಖ್ಯೆ:ನಅಇ 279 ಎಸ್ಎಫ್ಸಿ 2015, ದಿನಾಂಕ:08-01-2016.
2) ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಟಿಪ್ಪಣಿ ಸಂಖ್ಯೆ: ಬೆಂ.ಅ. &ನ.ಯೋ.ಸ/529/2015-16, ದಿನಾಂಕ: 25-02-2016.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಿಂದಿನ 7 ಸಿಎಂಸಿ ಪ್ರದೇಶಗಳು ಹಾಗೂ 1 ಟಿಎಮ್ಸಿ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಮೀಸಲಿಡಲಾಗಿರುವ ರೂ.250.00ಕೋಟಿಗಳ ವೆಚ್ಚದ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಮಾನ್ಯ ಬೆಂಗಳೂರು ಅಭಿವೃದ್ಧಿ ಹಾಗೂ ನಗರ ಯೋಜನಾ ಸಚಿವರ ಉಲ್ಲೇಖ(2)ರ ಟಿಪ್ಪಣಿಯಲ್ಲಿ (ಪ್ರತಿ ಲಗತ್ತಿಸಿದೆ) ತಿಳಿಸಿರುವಂತೆ ಕ್ಷೇತ್ರವಾರು ಹಂಚಿಕೆ ಮಾಡಿ, ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವಂತೆ ತಮ್ಮನ್ನು ಕೋರಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ

(ಕೆ.ಎಸ್ ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ.
ನಗರಾಭಿವೃದ್ಧಿ ಇಲಾಖೆ.

ಪ್ರತಿ ಅಗತ್ಯ ಕ್ರಮಕ್ಕಾಗಿ:
ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.

Scanned by CamScanner

ಕೆ.ಜೆ. ಜಾರ್ಜ್
ನಗರ ಅಭಿವೃದ್ಧಿ ಹಾಗೂ
ಜಿಲ್ಲಾ ಯೋಜನಾ ಸಚಿವರು

ದೂರವಾಣಿ : 22251798
ಆಂತರಿಕ : 22033489
ಕೊಠಡಿ ಸಂಖ್ಯೆ: 316
3ನೇ ಮಹಡಿ, ವಿಧಾನ ಸೌಧ
ಬೆಂಗಳೂರು – 560 001

(3)

ಸಂಖ್ಯೆ: ಬೆಂ.ಅ.&ನ.ಯೋ.ಸ./ವ2/29/2015-16

ದಿನಾಂಕ: 25/02/2016

ಟಿಪ್ಪಣಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಸೇರ್ಪಡೆಗೊಂಡ ನಗರಸಭೆ ಮತ್ತು ಪುರಸಭೆ ಪ್ರದೇಶದಲ್ಲಿನ ಹಿಂದುಳಿದ ಪ್ರದೇಶಾಭಿವೃದ್ಧಿಗಾಗಿ 2015-16ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯದಲ್ಲಿ ರೂ. 250 ಕೋಟಿಗಳನ್ನು ಮೀಸಲಿರಿಸಲಾಗಿದೆ.

ಪ್ರಸ್ತುತ 2015-16ನೇ ಆಯವ್ಯದಲ್ಲಿ ಘೋಷಿಸಿದಂತೆ ಹೊಸದಾಗಿ ಸೇರ್ಪಡೆಗೊಂಡ TMC ಮತ್ತು CMCಗಳ ಜೊತೆಗೆ ಸುತ್ತಮುತ್ತಲಿನ ವಾರ್ಡ್‌ಗಳನ್ನು ಸಹ ಸೇರ್ಪಡೆ ಮಾಡಿಕೊಂಡು ರೂ. 250 ಕೋಟಿಗಳನ್ನು ಈ ಕೆಳಕಂಡ ವಿಧಾನಸಭಾ ಕ್ಷೇತ್ರವಾರು ಅನುದಾನವನ್ನು ಹಂಚಿಕೆ ಮಾಡಿ ಪ್ರತ್ಯೇಕ ಶೀರ್ಷಿಕೆಯಡಿ (Separate Head of Account) ಮೀಸಲಿರಿಸಿ ಆಯಾ ಕ್ಷೇತ್ರದ ಮಾನ್ಯ ಶಾಸಕರೊಂದಿಗೆ ಚರ್ಚಿಸಿ, ಕೂಡಲೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಸೂಚಿಸಿದೆ.

ಕ್ರ.ಸಂ.	ಮತ ಕ್ಷೇತ್ರದ ಹೆಸರು	ಅನುದಾನ ಮೊತ್ತ (ರೂ ಕೋಟಿಗಳಲ್ಲಿ)
1	ಕೆ.ಆರ್. ಪುರಂ	45-00
2	ಯಶವಂತಪುರ	45-00
3	ರಾಜರಾಜೇಶ್ವರಿನಗರ	45-00
4	ಬ್ಯಾಟರಾಯನಪುರ	40-00
5	ಬೆಂಗಳೂರು ದಕ್ಷಿಣ	20-00
6	ಯಲಹಂಕ	15-00
7	ಮಹದೇವಪುರ	20-00
8	ದಾಸರಹಳ್ಳಿ	15-00
9	ಆನೇಕಲ್	5-00
	ಒಟ್ಟು	250-00

(ಕೆ.ಜೆ. ಜಾರ್ಜ್) 25/2/16

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ
ಕರ್ನಾಟಕ ಸರ್ಕಾರ
ಬೆಂಗಳೂರು

Scanned by CamScanner

ಕರ್ನಾಟಕ ಸರ್ಕಾರದ ನಡವಳಿಗಳು

(2)

ವಿಷಯ:- 2015-16ನೇ ಸಾಲಿನ ಆಯವ್ಯಯದಲ್ಲಿ ಬಿಬಿಎಂಪಿಗೆ ಘೋಷಿಸಿರುವ ರೂ.1500.00ಕೋಟಿಗಳ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:-1) 2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:344.

2) ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಮು.ಅ(ರಮೂಸೌ)/ ಪಿಆರ್/19/2015-16, ದಿನಾಂಕ: 03-06-2015.

3) ಆಯುಕ್ತರು, ಬಿಬಿಎಂಪಿ ರವರ ಪತ್ರ ಸಂಖ್ಯೆ: ಮು.ಅ(ರಮೂಸೌ)/ ಪಿಆರ್/155/2015-16, ದಿನಾಂಕ: 28-10-2015.

ಪ್ರಸ್ತಾವನೆ:-

2015-16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ:344ರಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ರೂ.1500.00ಕೋಟಿಗಳ ಹೆಚ್ಚುವರಿ ಅಂದಾಜು ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದೆಂದು ಘೋಷಿಸಲಾಗಿರುತ್ತದೆ.

ಆಯವ್ಯಯದಲ್ಲಿ ಘೋಷಿಸಿರುವ ರೂ.1500.00ಕೋಟಿಗಳ ಅನುದಾನದ ಪೈಕಿ ರೂ.1498.00ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಿ, ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲು, ಟೆಂಡರ್ ಆಹ್ವಾನಿಸಲು ಹಾಲಿ ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿ ವ್ಯಾಪ್ತಿಗೆ ತರುವಂತೆ ಮೇಲೆ ಓದಲಾದ (2)ರ ಪತ್ರದಲ್ಲಿ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಕುರಿತಂತೆ ಕೆಲವು ಸ್ಪಷ್ಟೀಕರಣಗಳನ್ನು ಸಹ ಮೇಲೆ ಓದಲಾದ (3)ರ ಪತ್ರದಲ್ಲಿ ನೀಡಿರುತ್ತಾರೆ.

ಆಯುಕ್ತರು, ಬಿಬಿಎಂಪಿ ರವರ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ನಅಇ 279 ಎಸ್‌ಎಫ್‌ಸಿ 2015,
ಬೆಂಗಳೂರು, ದಿನಾಂಕ:08-01-2016.

ಪ್ರಸ್ತಾವನೆಯಲ್ಲಿ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2015-16ನೇ ಸಾಲಿನಲ್ಲಿ ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಳ್ಳುವ ರೂ.976.00ಕೋಟಿಗಳ ಅಂದಾಜು ವೆಚ್ಚದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾ ಯೋಜನೆಗೆ ಷರತ್ತಿಗೊಳಪಟ್ಟು ಅನುಮೋದನೆ ನೀಡಿದೆ.

(ರೂ.ಕೋಟಿಗಳಲ್ಲಿ)

ಕ್ರ. ಸಂ	ಕಾಮಗಾರಿಗಳ ಹೆಸರು	ಅಂದಾಜು ಯೋಜನಾ ಮೊತ್ತ
1.	ಕಯುಐಡಿಎಫ್‌ಸಿ ಮೂಲಕ ಬೆಂಗಳೂರು ನಗರದಲ್ಲಿ ಘನ ತ್ಯಾಜ್ಯ ಸಂರಕ್ಷಣಾ ಘಟಕಗಳ ಕಾರ್ಯಾರಂಭ	200.00
2	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಿಂದಿನ 7 ಸಿಎಂಸಿ ಪ್ರದೇಶಗಳು ಹಾಗೂ 1 ಟಿಎಮ್‌ಸಿ ಪ್ರದೇಶವನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವುದು.	250.00
3	ಪಾಲಿಕೆ ವ್ಯಾಪ್ತಿಯಲ್ಲಿ ಪ್ರಗತಿಯಲ್ಲಿರುವ ರೈಲ್ವೆ ಕಳಸೇತುವೆ/ ಮೇಲುಸೇತುವೆ ಯೋಜನೆಗಳಿಗೆ ನೈರುತ್ಯ ರೈಲ್ವೆ ಇಲಾಖೆಗೆ ಪಾಲಿಕೆಯ ವತಿಯಿಂದ ನೀಡಬೇಕಾಗಿರುವ ಮೊತ್ತ ಹಾಗೂ ಭೂಸ್ವಾಧೀನ ವೆಚ್ಚ.	50.00

ಮುಖ್ಯ ಆಯುಕ್ತರವರ ಕಛೇರಿ (ರ.ಮೂ.ಸೌ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by CamScanner

4	ಸುಭ್ರತೋಮುಖರ್ಜಿ ರಸ್ತೆಯನ್ನು ಗಂಗಮ್ಮ ವೃತ್ತದಿಂದ ಸದ್ಭಾರ್ಥನಗರ ವೃತ್ತದವರೆಗೆ ಅಗಲೀಕರಣಗೊಳಿಸುವುದು (ವಾಯುಸೇನಾ ಇಲಾಖೆಯ ಜಾಗವನ್ನು ಪಡೆದು) ಮತ್ತು ಅಂಡರ್‌ಪಾಸ್ ನಿರ್ಮಾಣ ಮಾಡುವುದು.	45.00
5	ಡಾ॥ ಅಂಬೇಡ್ಕರ್ (ಬ್ಯಾನರಿ ರಸ್ತೆ) ರಸ್ತೆಯನ್ನು ಎ೦.ಎ೦. ರಸ್ತೆಯಿಂದ ಹೂರವರ್ತುಲ ರಸ್ತೆವರೆಗೂ ಅಗಲೀಕರಿಸಗೊಳಿಸುವುದು.	60.00
6	ವರ್ತೂರು ರಸ್ತೆಯನ್ನು ಗಂಬೂರು ಮಾರ್ಗವಾಗಿ ಸರ್ಜಾಪುರ ರಸ್ತೆವರೆಗೂ ಅಗಲೀಕರಣಗೊಳಿಸುವುದು.	30.00
7	ದಿಣ್ಣೂರು ಮುಖ್ಯರಸ್ತೆಯನ್ನು ಸಂಜಯನಗರ ಮುಖ್ಯರಸ್ತೆಯಿಂದ ಅಂಬೇಡ್ಕರ್ ವೈದ್ಯಕೀಯ ಕಾಲೇಜ್‌ವರೆಗೂ ಅಗಲೀಕರಣಗೊಳಿಸಲು ಯೋಜನಾವರದಿ ತಯಾರಿಸಲು	50.00
8	ಬನ್ನೇರುಘಟ್ಟ ರಸ್ತೆಯನ್ನು ಜೆಡಿಮರ ಜಂಕ್ಷನ್‌ನಿಂದ ನೈಸ್ ರಸ್ತೆವರೆಗೂ ಅಗಲೀಕರಣಗೊಳಿಸುವುದು (ಅಂದಾಜು ಯೋಜನಾ ಮೊತ್ತ ರೂ.190.00 ಕೋಟಿ) (ಅ) ಮೊದಲನೇ ಹಂತದಲ್ಲಿ ನೈಸ್ ರಸ್ತೆಯಿಂದ ಕೋಳಿ ಫಾರಂ ಜಂಕ್ಷನ್‌ವರೆಗೆ ಅಗಲೀಕರಣ ಯೋಜನೆ	20.00
9	ಸರ್ಜಾಪುರ ರಸ್ತೆಯನ್ನು ಹೂರವರ್ತುಲ ರಸ್ತೆಯಿಂದ ಪಾಲಿಕೆಯ ಸರಹದ್ದಿನ ವರೆಗೆ ಅಗಲೀಕರಣಗೊಳಿಸುವುದು.	100.00
10	ಜಯಮಹಲ್ ರಸ್ತೆ ಅಗಲೀಕರಣ ಯೋಜನೆ	6.00
11	ಬಳ್ಳಾರಿ ರಸ್ತೆ ಅಗಲೀಕರಣ ಯೋಜನೆ	5.00
	ಪಾಲಿಕೆ ವ್ಯಾಪ್ತಿಯಲ್ಲಿ ಆಯ್ದ ಜಂಕ್ಷನ್‌ಗಳಲ್ಲಿ ಗ್ರೇಡ್ ಸಪರೇಟರ್‌ಗಳನ್ನು ನಿರ್ಮಾಣ ಮಾಡುವುದು.	
12	ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ತರ ದಕ್ಷಿಣ ಮತ್ತು ಪೂರ್ವ-ಪಶ್ಚಿಮ Elevated Corridor ಸಮಗ್ರ ಯೋಜನಾವರದಿ ತಯಾರಿಸುವುದು.	25.00
13	ಮಿನರ್ವ ವೃತ್ತದಿಂದ ಹಡ್ಸನ್ ವೃತ್ತದವರೆಗೆ ಜಂಕ್ಷನ ಮೇಲುಸೇತುವೆ ನಿರ್ಮಾಣ ಯೋಜನೆ	135.00
	ಒಟ್ಟು	976.00

ಈ ಅನುಮೋದನೆಯನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲಾಗಿದೆ:-

1. ಈ ಆದೇಶದಲ್ಲಿ ನೀಡಿರುವ ಅನುಮೋದನೆಯು ಕಾಮಗಾರಿಗಳ ಕ್ರಿಯಾ ಯೋಜನೆಗೆ ನೀಡಿರುವ ಅನುಮೋದನೆಯೇ ಹೊರತು, ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆಯಲ್ಲ. ಆದ್ದರಿಂದ, ಅನುಮೋದನೆಗೊಂಡ 13 ಕಾಮಗಾರಿಗಳಿಗೆ ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು ವಿಸ್ತೃತ ಯೋಜನಾ ವರದಿಗಳನ್ನು (ಡಿಪಿಆರ್) ಸಿದ್ಧಪಡಿಸಿ, ಸಕ್ಷಮ ಪ್ರಾಧಿಕಾರಗಳಿಂದ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು, ಪ್ಯಾಕೇಜ್‌ವಾರು ಟೆಂಡರ್ ಕರೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು.

2. ಈ ಕ್ರಿಯಾ ಯೋಜನೆಯಲ್ಲಿ ತೆಗೆದುಕೊಳ್ಳಲಾಗಿರುವ ಕಾಮಗಾರಿಗಳನ್ನು ಇತರೆ ಯಾವುದೇ ಯೋಜನೆಯಡಿಯಲ್ಲಿ ಪುನಾರಾವರ್ತನೆ ಆಗಿರುವುದಿಲ್ಲ ಎಂಬುದನ್ನು ಬಿಬಿಎಂಪಿಯು ಪೂರ್ವಾನ್ವಯವಾಗಿ ಖಚಿತಪಡಿಸಿಕೊಳ್ಳತಕ್ಕದ್ದು.

3. ಅನುಮೋದಿತ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು-2000, ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನೆಆಸುಇ 20 ಇಜಿವಿ 2009 (4), ದಿನಾಂಕ: 13-07-2009 ರಲ್ಲಿನ ಎಲ್ಲಾ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ, ಬಿಬಿಎಂಪಿ ವತಿಯಿಂದ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳತಕ್ಕದ್ದು.

Scanned by CamScanner

(1)

4. ಅನುಮೋದನೆ ನೀಡಲಾದ ಶ್ರೇಯಾಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸತಕ್ಕದ್ದು,

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಎಫ್‌ಡಿ 736 ವೆಚ್ಚ-9/2015, ದಿನಾಂಕ:30-12-2015ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಎಸ್ ಭಾಗ್ಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸನೆ /ಲೆಕ್ಕ ಪತ್ರ ಬೆಂಗಳೂರು, ಕರ್ನಾಟಕ.
2. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು
3. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
4. ಎಲ್ಲಾ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರಪಾಲಿಕೆ, ಬೆಂಗಳೂರು.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-9), ವಿಧಾನ ಸೌಧ, ಬೆಂಗಳೂರು.
8. ಲೆಕ್ಕಾಧೀಕ್ಷಕರು, ತಾಂತ್ರಿಕ ಕೋಶ, ನಗರಾಭಿವೃದ್ಧಿ ಇಲಾಖೆ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

Scanned by CamScanner